ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 565
ಸದಸ್ಯರ ಹೆಸರು : ಶ್ರೀಮತಿ ಎಸ್. ವೀಣಾ ಅಚ್ಚಯ್ಯ,
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 21-02-2022.
ಉತ್ತರಿಸುವ ಸಚಿವರು : ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕೊಡಗು ಜಿಲ್ಲೆಯ ಮಡಿಕೇರಿ ನಗರದಲ್ಲಿ ನಿರ್ಮಾಣಗೊಳ್ಳುತ್ತಿರುವ ಸುವರ್ಣ ಕರ್ನಾಟಕ ಸಮುಚ್ಚಯ ಭವನ ನಿರ್ಮಾಣ ಕಾಮಗಾರಿ ಹಲವಾರು ವರ್ಷಗಳಿಂದ ಪೂರ್ಣಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಬಂದಿದ್ದಲ್ಲಿ, ಸದರಿ ಕಾಮಗಾರಿಯು ವಿಳಂಬವಾಗಿರುವುದಕ್ಕೆ ಕಾರಣಗಳೇನು;	• ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹೆಸರಿನಲ್ಲಿ ಜಾಗ ಮಂಜೂರಾತಿಯಾಗದ ಕಾರಣ ಜಿಲ್ಲಾಧಿಕಾರಿ, ಕೊಡಗು ಜಿಲ್ಲೆ ಮಡಿಕೇರಿ ಅವರೊಂದಿಗೆ ಈ ಬಗ್ಗೆ ಕ್ರಮವಹಿಸಿ. ಆದೇಶ ಸಂಖ್ಯೆ:. ಜಾಗ (1)/119/ 2009-10 ದಿನಾಂಕ:31.03.2010ರ ಆದೇಶದನ್ವಯ 0.80 ಎಕರೆ ಜಾಗವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ. • ಈ ಮಧ್ಯೆ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಹಾಗೂ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ರಂಗಮಂದಿರ ಹಾಗೂ ಇಲಾಖೆಯ ಇತರೇ ಕಾಮಗಾರಿಗಳನ್ನು ಒಳಗೊಂಡಂತೆ ಸಮುಚ್ಚಯ ನಿರ್ಮಾಣಕ್ಕಾಗಿ ಪ್ರಸ್ತಾವನೆ ಸಲ್ಲಿಸಿದ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ:ಕಸಂವಾಪ್ರ 609 ಕಸಧ 2012 ದಿನಾಂಕ:24.05.2013ರ ಆದೇಶದನ್ವಯ ರೂ.4.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. • ನಂತರ ಲೋಕೋಪಯೋಗಿ ಇಲಾಖೆಯಿಂದ ಪರಿಷ್ಕೃತ ಅಂದಾಜು ಪಟ್ಟಿಗೆ ಅನುಮೋದನೆ ಪಡೆದು, 2017-18ನೇ ಸಾಲಿನಲ್ಲಿ ಸುವರ್ಣ ಸಮುಚ್ಚಯ ನಿರ್ಮಾಣ ಕಾಮಗಾರಿ ಪ್ರಾರಂಭಿಸಲಾಗಿದೆ.
ಇ)	ಸದರಿ ಕಾಮಗಾರಿಯು ಅನುಮೋದನೆಗೊಂಡ ವರ್ಷ ಯಾವುದು; ಹಾಗೂ ಈ ಕಾಮಗಾರಿಗೆ ಮಂಜೂರಾದ, ಬಿಡುಗಡೆಯಾದ ಹಾಗೂ ಖರ್ಚಾಗಿರುವ ಅನುದಾನದ ವಿವರಗಳೇನು;	• ಸುವರ್ಣ ಸಮುಚ್ಚಯ ಕಾಮಗಾರಿಗೆ ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 609 ಕಸಧ 2012 ದಿನಾಂಕ:24.05.2013ರ ಆದೇಶದನ್ವಯ ರೂ.4.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. • ಇಲಾಖೆಯಿಂದ ಬಿಡುಗೆಯದ ಮೊತ್ತ : ರೂ.307 ಲಕ್ಷ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ದಿಂದ : ರೂ.500 ಲಕ್ಷ ಒಟ್ಟು ಮೊತ್ತ : ರೂ.807 ಲಕ್ಷ ಇಲ್ಲಿಯವರೆಗೆ ಖರ್ಚಾಗಿರುವ ಮೊತ್ತ : ರೂ.307 ಲಕ್ಷ ಕಾಮಗಾರಿಯು ಪ್ರಗತಿಯಲ್ಲಿದೆ. • ರೂ.250.00ಲಕ್ಷಗಳನ್ನು ಜಿಲ್ಲಾಧಿಕಾರಿ, ಕೊಡಗು ಜಿಲ್ಲೆ ಮಡಿಕೇರಿ ಇವರ ಖಾತೆಯಿಂದ ಲೋಕೋಪಯೋಗಿ ಇಲಾಖೆಗೆ ಬಿಡುಗಡೆ ಗೊಳಿಸಲು ಕ್ರಮವಹಿಸಿದೆ.
ಈ)	ಸದರಿ ಕಾಮಗಾರಿಗೆ ಬಿಡುಗಡೆಯಾಗಬೇಕಾಗಿರುವ ಬಾಕಿ ಅನುದಾನವೆಷ್ಟು;	ಸದರಿ ಕಾಮಗಾರಿಗೆ ಬಿಡುಗಡೆಯಾಗಬೇಕಾಗಿರುವ ಬಾಕಿ ಅನುದಾನ ರೂ.93.00 ಲಕ್ಷ.

ಉ)	ಸದರಿ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು?	ಲೋಕೋಪಯೋಗಿ ಇಲಾಖೆಯವರ ಮಾಹಿತಿಯಂತೆ, ಸದ ಕಾಮಗಾರಿಯನ್ನು ಏಪ್ರಿಲ್-2023ರ ಅಂತ್ಯದ ಪೂರ್ಣಗೊಳಿಸಲಾಗುವುದು.

ಸಂಖ್ಯೆ: ಕಸಂವಾ 13 ಕವಿಸ 2022

(ವಿ. ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು